ಊ) ಬೆಂಗಳೂರು ಮಹಾನಗರ ಪಾಲಿಕೆಯು ಪ್ರತಿ ಟನ್ ಕಸ (ತ್ಯಾಜ್ಯ) ಮೆ॥ ಶ್ರೀನಿವಾಸ ಗಾಯತ್ರಿ ರಿಸೋರ್ಸ್ ರಿಕವರಿ ಲಿಮಿಟೆಡ್ ಕಂಪನಿಗೆ ನೀಡುವುದಕ್ಕೆ ರೂ 1 ಕ್ಕೆ ಒಪ್ಪಂದ ಮಾಡಿಕೊಂಡಿದೆ

ಋ) ಈ ಯೋಜನೆಯ ಉತ್ಪಾದನಾ ಪ್ರಮಾಣ 8 ಮೆ ವ್ಯಾ ಆಗಿರುತ್ತದೆ

ಎ) ವಿದ್ಯುತ್ ಉತ್ಪಾದಕರೊಂದಿಗೆ 10 ವರ್ಷಗಳ ಅವಧಿಗೆ ವಿದ್ಯುತ್ ಖರೀದಿ ಒಡಂಬಡಿಕೆ ಮಾಡಿಕೊಂಡ ನಂತರ ಕಂಪನಿಯು ಯೋಜನೆಯನ್ನು ಕಮಿಷನ್ ಮಾಡಿದ ನಂತರದಿಂದ ಪ್ರತಿ ಯೂನಿಟ್‌ಗೆ ರೂ 2 85 ರಂತೆ ಹಾಗೂ ಪ್ರತಿ ವರ್ಷಕ್ಕೆ ಶೇಕಡ 2 ರಷ್ಟು ಎಸ್ಕಲೇಷನ್ ದರವನ್ನು ಖರೀದಿ ಒಡಂಬಡಿಕೆಯ ಅವಧಿಯವರೆಗೆ ನಿಗದಿಪಡಿಸಲು ಅವಕಾಶವಿದೆ

1547 (2084) ಶ್ರೀ ಸುನೀಲ್ ಕುಮಾರ್ ವಿ (ಕಾರ್ಕಳ) – ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರ ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ಅವ್ಯಾಹತವಾಗಿ (ಅನಧಿಕೃತವಾಗಿ) ಅಕ್ರಮವಾಗಿ ಲೈವ್‌ಬ್ಯಾಂಡ್‌ಗಳು ತಮ್ಮ ಚಟುವಟಿಕೆ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಯಾವ ಯಾವ ಸ್ಥಳಗಳಲ್ಲಿ ಈ ದಂದೆ ನಡೆಯುತ್ತಿದೆ,

ಇ) ಈ ಲೈವ್‌ಬ್ಯಾಂಡ್‌ಗಳನ್ನು ನಡೆಸಲು ಹೋಟೆಲ್, ಕ್ಲಬ್‌ಗಳ ಬದಲಿಗೆ ಕಲ್ಯಾಣ ಮಂಟಪಗಳನ್ನು ಬಳಕೆ ಮಾಡಿಕೊಳ್ಳುತ್ತಿರುವುದು ನಿಜವೇ,

ಈ) ಹಾಗಿದ್ದಲ್ಲಿ, ಇದರ ತಡೆಗೆ ರಾಜ್ಯ ಸರ್ಕಾರ ಯಾವ ಕ್ರಮ ಕೈಗೊಂಡಿದೆ,

ಉ) ಇದುವರೆಗೆ ಎಷ್ಟು ಕಲ್ಯಾಣ ಮಂಟಪದಲ್ಲಿ ಪ್ರದರ್ಶನ ನಡೆಸುವವರನ್ನು ಪತ್ತೆ ಹಚ್ಚಲಾಗಿದೆ ಇಂತಹವರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಅ) ಬೆಂಗಳೂರು ನಗರ ಭಾಗದಲ್ಲಿ ಯಾವುದೇ ಲೈವ್‌ಬ್ಯಾಂಡ್ ಮನರಂಜನಾ ಕೇಂದ್ರಗಳು ನಡೆಯುತ್ತಿರುವುದಿಲ್ಲ ಆ ಬಗ್ಗೆ ಮಾಹಿತಿ ಬಂದಲ್ಲಿ ತಕ್ಷಣವೇ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲು ಎಲ್ಲಾ ಪೊಲೀಸ್ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಆದೇಶ ನೀಡಲಾಗಿದೆ

ಆ) ಅನ್ವಯಿಸುವುದಿಲ್ಲ

ಇ) ಬೆಂಗಳೂರು ನಗರದ ಭಾಗದಲ್ಲಿ ಇಂತಹ ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ

ಈ) ಅನ್ವಯಿಸುವುದಿಲ್ಲ

ಉ) ಉದ್ಭವಿಸುವುದಿಲ್ಲ

1548 (2208) ಶ್ರೀ ಸುನೀಲ್ ಕುಮಾರ್ ವಿ (ಕಾರ್ಕಳ) – ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿಗಳೂ ಸೇರಿದಂತೆ ಪ್ರಮುಖ ರಸ್ತೆಗಳ ಅಕ್ಕ-ಪಕ್ಕ ಹಾಗೂ ಹೆದ್ದಾರಿಗೆ ಸಂಬಂಧಪಟ್ಟ ಜಾಗದಲ್ಲಿ ಅನಧಿಕೃತವಾಗಿ ದರ್ಗಾ(ಮಸೀದಿ) ಮತ್ತು ಶಿಲುಬೆಗಳನ್ನು ನಿರ್ಮಿಸಿರುವ ಪ್ರಕರಣಗಳು ಬೆಳಕಿಗೆ ಬಂದಿದೆಯೇ,

ಆ) ಇಂತಹ ಅನಧಿಕೃತವಾಗಿ ತಲೆಎತ್ತಿರುವಂತಹ ದರ್ಗಾ ಶಿಲುಬೆಗಳ ಸಂಖ್ಯೆ ಎಷ್ಟು, (ಜಿಲ್ಲಾವಾರು ಹಾಗೂ ಹೆದ್ದಾರಿ ರಸ್ತೆಗಳವಾರು ವಿವರ ಒದಗಿಸುವುದು)

ಇ) ಈ ಅನಧಿಕೃತ ದರ್ಗಾ, ಶಿಲುಬೆಗಳ ತೆರವಿಗೆ ಸರ್ಕಾರ ಕೈಗೊಂಡ ಕ್ರಮಗಳೇನು,

ಈ) ಇದುವರೆಗೆ ತೆರವುಗೊಳಿಸದಿರಲು ಕಾರಣಗಳೇನು, ಈಗಾಗಲೇ ತೆರವು ಗೊಳಿಸಿರುವವುಗಳ ಸಂಖ್ಯೆ ಎಷ್ಟು, (ಜಿಲ್ಲಾವಾರು ವಿವರವಾದ ಮಾಹಿತಿ ಒದಗಿಸುವುದು)?